★ ಸಸಿತೋಟ




ಅಮೆರಿಕದ ವುಡ್‌ಸ್ಟಾಕ್‌ನ ಸ್ಟೀವ್ ನಿರ್ಮಿಸಿರುವ ಬಾಳೆಹಣ್ಣಿನಾಕಾರದ ಕಾರು. ಎರಡು ವರ್ಷಗಳ ಅವಧಿಯಲ್ಲಿ 5000 ಪೌಂಡ್ (ಸುಮಾರು 5 ಲಕ್ಷ ರೂಪಾಯಿ) ವ್ಯಯಿಸಿ ನಿರ್ಮಿಸಿದ್ದಾನಂತೆ. ಒಬಾಮಾಗೆ 'ಬನಾನಾ ಅಧ್ಯಕ್ಷ' ಎಂಬ ಅಡ್ಡ ಹೆಸರೇನೋ ಇದೆ. ಹಾಗಂತ ಸ್ಟೀವ್‌ನ ಈ ಬನಾನಾ ಕಾರು ನಿರ್ಮಾಣಕ್ಕೆ ವಿಶೇಷ ಅರ್ಥವನ್ನು ಕಲ್ಪಿಸಬೇಕಾಗಿಲ್ಲ.

ಜಪಾನಿನ ಈ ಪಬ್‌ನಲ್ಲಿ 'ಬೋಡು ಮಂಡೆಯವರು ಅತ್ಯಂತ ಸುಂದರರು' ಎಂಬ ಫಲಕ ತಗುಲಿಸಿದ್ದಾರಂತೆ. ಬೊಕ್ಕ ತಲೆಯವರಿಗೆ ಡ್ರಿಂಕ್ಸ್ ಮೇಲೆ ವಿಶೇಷ ರಿಯಾಯ್ತಿ ಬೇರೆ. ಬೊಕ್ಕ ತಲೆಯವರು ವಿಗ್ ಕಳಚಿಟ್ಟು ಬೇಕಾಬಿಟ್ಟಿ ಬೋಳು ಮಂಡೆ ಪ್ರದರ್ಶಿಸಿ ಡಬಲ್ ಖುಷಿ ಪಡಬಹುದು.



ಜಗತ್ತಿನ ಮೊಟ್ಟ ಮೊದಲ ಟ್ರಿಲಿಯನೇರ್ (ಒಂದು ಲಕ್ಷ ಕೋಟಿ ರೂಪಾಯಿ ಆಸ್ತಿಯ ಒಡೆಯ) ಇನ್ನು 25 ವರ್ಷಗಳಲ್ಲಿ ಕಾಣಿಸಿಕೊಳ್ಳಲಿದ್ದಾನಂತೆ. ಸದ್ಯಕ್ಕೆ ಮೈಕ್ರೋಸಾಫ್ಟ್‌ನ ಬಿಲ್ ಗೇಟ್ಸ್ ಈ ರೇಸ್‌ನಲ್ಲಿದ್ದು ಅವರನ್ನು ಬದಿಗೆ ಸರಿಸುವ ನವ ಶ್ರೀಮಂತರೂ ಹುಟ್ಟಿಕೊಳ್ಳಬಹುದು ಎಂಬುದು ಆರ್ಥಿಕ ಭವಿಷ್ಯ ನುಡಿಯುವವರ ಅಂಬೋಣ. ಭಾರತ ಮತ್ತು ಚೀನಾದ ಒಡಲಲ್ಲೂ ಈ ಟ್ರಿಲಿಯನೇರ್ ಇರಬಹುದು.



ಇಂಗ್ಲೆಂಡ್‌ನ ಶೂ ವಿನ್ಯಾಸಕ ಕ್ರಿಸ್ ತಯಾರಿಸಿರುವ ಸ್ಟೇನ್‌ಲೆಸ್ ಸ್ಟೀಲ್‌ನ ಎತ್ತರ ಹಿಮ್ಮಡದ ಸ್ಯಾಂಡಲ್ಸ್. ಒಂದು ಸಾವಿರ ವರ್ಷಗಳ ಗ್ಯಾರಂಟಿ ಇದೆಯಂತೆ. ಅಜ್ಜಿಯ ಆಸ್ತಿ ಮನೆತನದ ಹೆಣ್ಣುಮಕ್ಕಳಿಗೆ ಬಳುವಳಿಯಾಗಿ ನೀಡುವುದೆಂದರೆ ಇದೇ ಇರಬಹುದು.

ಬೀಜಿಂಗ್‌ನಲ್ಲಿರುವ ಮನರಂಜನಾ ಕ್ಲಬ್‌ನಲ್ಲಿ ಪ್ರದರ್ಶನ ನೀಡಿದ ನಂತರ ಕಲಾವಿದರಿಗೆ ವೇದಿಕೆಯ ಮೇಲೆಯೇ ಬೋಗುಣಿ ತುಂಬಾ ಬಿಯರ್ ಹೀರುವ ಮಜಾ. ಕಲಾವಿದನ ಹೊಟ್ಟೆಯ ಸಾಮರ್ಥ್ಯ ಎಷ್ಟಿದೆಯೋ ಹಾಗೆಯೇ ಬೋಗುಣಿಗೆ ಸುರಿಯುವ ಶಕ್ತಿ ಪರಿಚಾರಕನಿಗೂ ಇರಬೇಕು. ಸದ್ಯ, ಪ್ರದರ್ಶನ ನೀಡಿದ ಮೇಲೆ ಈ ಬಿಯರ್ ಹೀರುವ ಪ್ರದರ್ಶನ. ಮೊದಲೇ ಕುಡಿದರೆ ಅದೇ ಒಂದು ಬೇರೆಯೇ ಪ್ರದರ್ಶನವಾಗಿ ಬಿಡುತ್ತಿತ್ತು.



ಜೋರ್ಡಾನಿನ 'ಸೆವೆನ್ ಸ್ಟಾರ್ಸ್' ಟೀವಿ ಚಾನೆಲ್‌ನಲ್ಲಿ ನೆರೆಯ ಸಿರಿಯಾ ನಾಗರಿಕ ಯುದ್ಧದ ಕುರಿತು ಇಬ್ಬರು ಪತ್ರಕರ್ತರು ಚರ್ಚಿಸುತ್ತಿದ್ದರಂತೆ. ಚರ್ಚೆ ಕಾವೇರಿ ಇಬ್ಬರೂ ಪತ್ರಕರ್ತರು ಎದ್ದು ನಿಂತು ಟೇಬಲ್ ಮುರಿದು ಹೊಡೆದಾಡಲು ಶುರು ಮಾಡಿದರಂತೆ. ಸ್ಟುಡಿಯೋ ಕೆಲಸಗಾರರು ಮಧ್ಯೆ ಪ್ರವೇಶಿಸಿ ಸಂಧಾನ ನಡೆಸಬೇಕಾಯ್ತು. ನೆರೆಯ ಯುದ್ಧ ಮನೆಯೊಳಗೂ ಹಬ್ಬುವುದೆಂದರೆ ಇದೇ ಇರಬಹುದು.